ಎಂ.ವಿ.ಸಿ. ಸಂಖ್ಯೆಃ 355/2024
ಪಿ. ಡಬ್ಲ್ಯೂಃ 1

ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಿಂದಃ-

ಅರ್ಜಿದಾರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆ ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರ ಪರ ವಕೀಲರಿಂದಃ-

ನನಗೆ ಆಟೋವನ್ನು ಚಲಾಯಿಸಲು ಚಾಲನಾ ಪತ್ರ ಇರಲಿಲ್ಲ. ಅಪಘಾತ ಸಮಯದಲ್ಲಿ ನನ್ನ ಆಟೋಗೆ  ಪರ್ಮೀಟ್ ಇರಲಿಲ್ಲ ಎಂದರೆ ಸರಿ. ಅಪಘಾತ ಸ್ಥಳವು ಮೂರು ರಸ್ತೆ ಕೂಡುವಂತಹ ಸ್ಥಳ ಎಂದರೆ ಸರಿ. ಸದರಿ ದಿನ ನಾನು ಸಖರಾಯಪಟ್ಟಣದಿಂದ ಚಿಕ್ಕಮಗಳೂರಿಗೆ ಬರುತ್ತಿದ್ದೆನು. ಲಾರಿಯು ಚಿಕ್ಕಮಗಳೂರಿನಿಂದ ಸಖರಾಯಪಟ್ಟಣದ ಕಡೆಗೆ ಹೋಗುತ್ತಿತ್ತು ಎಂದರೆ ಸರಿ. ನಿಪಿ-3 ಮಹಜರ್ ನಲ್ಲಿ ತೋರಿಸಿದಂತಹ ನಕ್ಷೆ ಸರಿ ಇರುತ್ತದೆ. ನಾನು ರಸ್ತೆಯ ಎಡಬದಿಯಿಂದ ಬಲಬದಿಗೆ ನನ್ನ ಆಟೋವನ್ನು ಚಲಾಯಿಸಿ ನನ್ನ ತಪ್ಪಿನಿಂದಲೇ ಅಪಘಾತ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನ ಲಾರಿ ಚಾಲಕ ರಸ್ತೆಯ ಎಡಬದಿಯಿಂದಲೇ ತನ್ನ ವಾಹನವನ್ನು ಚಲಾಯಿಸಿದ್ದು ಆತನ ತಪ್ಪಿನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ. ನನಗೆ ಬಿ.ಪಿ.ಎಲ್ ಕಾರ್ಡ್ ಇರುತ್ತದೆ ಎಂದರೆ ಸರಿ. ನನ್ನ ಎಲ್ಲಾ ಚಿಕಿತ್ಸೆಯು ಉಚಿತವಾಗಿ ಆಗಿತ್ತು ಎಂದರೆ ಸಾಕ್ಷಿದಾರರು  ನಾನು ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೂ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

ಎಂ.ವಿ.ಸಿ. ಸಂಖ್ಯೆ: 355/2024
ಪಿ. ಡಬ್ಲ್ಯೂ: 1

<u>ಪಾಟೀ ಸವಾಲು: 3 ನೇ ಎದುರುದಾರ ಪರ ವಕೀಲರಿಂದ:-</u>

(3 ನೇ ಎದುರುದಾರ ಪರ ವಕೀಲರನ್ನು ಕರೆಸಲಾಗಿ ಗೈರು ಹಾಜರಿರುತ್ತಾರೆ. ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ:ಹೇ:ಕೇ:ಸ:ಇ:ಎ:ಒ:

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಂ.ಎ.ಸಿ.ಟಿ., ಚಿಕ್ಕಮಗಳೂರು.

ಎಸ್‌ಆರ್: